**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ**

**C.C.No.**80/2022

| | | |
|---|---|---|
| **ಹೆಸರುಃ** | **ಜಯಶ್ರೀ** | **CW**-8 |
| **ತಂದೆ/ಗಂಡ ಹೆಸರುಃ** | **ಶ್ರೀನಿವಾಸ್** | **PW**-11 |
| **ವಯಸ್ಸುಃ** | **62 ವರ್ಷ** | |
| **ವೃತ್ತಿಃ** | **ನಿವೃತ್ತ ಶಿಕ್ಷಕಿ** | |
| **ವಿಳಾಸಃ** | **ಪುತ್ತೂರು** | **ದಿನಾಂಕಃ** 24-03-2025 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ಸಕಲೇಶಪುರ ವೃತ್ತ ನಿರೀಕ್ಷಕರ ಕಛೇರಿಯಿಂದ ಪೋಲೀಸರು ಬಂದಿದ್ದರು. ಚಾಸಾ-2 ರವರ ಜನ್ಮ ದಿನಾಂಕದ ಕುರಿತು ದಾಖಲಾತಿ ಒದಗಿಸುವಂತೆ ನನಗೆ ಪತ್ರ ನೀಡಿದ್ದರು. ಆನಂತರ ಸದರಿ ಚಾಸಾ-2 ರವರ ದಾಖಲಾತಿಗಳನ್ನು ಪರಿಶೀಲಿಸಿ ದಿಃ 02-11-2021 ರಂದು ಚಾಸಾ-2 ರವರ ವರ್ಗಾವಣೆ ಪ್ರಮಾಣಪತ್ರದೊಂದಿಗೆ ನಮ್ಮ ಪತ್ರದ ಮೂಲಕ ದಾಖಲಾತಿಗಳನ್ನು ಒದಗಿಸಿರುತ್ತೇನೆ. ಸಾಕ್ಷಿಯು ದಿಃ 02-11-2021 ರಂದು ಅವರಿಗೆ ನೀಡಿದ ಪತ್ರದಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಹಿಯನ್ನು ನಿಪಿ-11ಎ ಎಂದು ಗುರುತಿಸಲಾಯಿತು. ದಿಃ 02-11-2021 ರ ಪತ್ರವನ್ನು ನಿಪಿ-12 ಎಂದು, ಸಹಿಯನ್ನು ನಿಪಿ-12ಎ ಎಂದು ಗುರುತಿಸಲಾಯಿತು. ವರ್ಗಾವಣೆ ಪ್ರಮಾಣಪತ್ರವನ್ನು ನಿಪಿ13 ಎಂದು, ಸಹಿಯನ್ನು ನಿಪಿ-13ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ ಸಕಲೇಶಪುರ**